**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇಂಡಿ.**
**ಸಿಸಿ.ನಂಃ 879/202017**

**ಪಿ.ಡಬ್ಲ್ಯೂ- 1**
**ಸಿ.ಡಬ್ಲ್ಯೂ-5**

| | | |
|---|---|---|
| ಸಾಕ್ಷಿಯ ಹೆಸರು | : | ಆಶೋಕ ಗೊಣಸಗಿ |
| ತಂದೆ/ಗಂಡನ ಹೆಸರು | : | ಸೋಮನಿಂಗ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ |
| ವಾಸಸ್ಥಳ | : | ಇಂಡಿ. |

**ದಿನಾಂಕಃ 07-10-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತುಃ**

**<u>ಮುಖ್ಯ ವಿಚಾರಣೆಃ ಮಾನ್ಯ ಸ. ಸ.ಅ ರವರಿಂದ:</u>**

ನಾನು 2008 ರಿಂದ ಇಲ್ಲಿಯವರೆಗೂ ಅಬಕಾರಿ ಪೇದೆ ಅಂತಾ ಇಂಡಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂದಪಟ್ಟಂತೆ, ದಿಃ 11.06.2016 ರಂದು ಚಾಸಾ–1 ರವರು ಗಸ್ತು ಕುರಿತು ಎಲ್ಲಾ ಸಿಬ್ಬಂದಿ ವಿಷಯ ತಿಳಿಸಿ, 5.10 ಗಂಟೆಗೆ ಎಲ್ಲರೂ ಸೇರಿ ಇಂಡಿಯಿಂದ ಆಗರಖೇಡ ಮಾರ್ಗಾವಾಗಿ ಹೊರಟಿದ್ದೇವು. ಇಂಡಿ ಬಸವೇಶ್ವರ ಸರ್ಕಲ್ ಹತ್ತಿರ ಇಬ್ಬರು ಪಂಚರನ್ನು ಕರೆದುಕೊಂಡು, ನಂತರ ಅವರಿಗೆ ಅಬಕಾರಿ ಆಕ್ರಮ ಕಂಡು ಬಂದರೆ ಅವರಿಗೆ ಪಂಚರಾಗುವಂತೆ ತಿಳಿಸಿ, ಎಲ್ಲರೂ ಕೂಡಿಕೊಂಡು ಇಲಾಖೆ ವಾಹನದಲ್ಲಿ ಹೀರೆಬೇವನೂರು ಗ್ರಾಮಕ್ಕೆ ಹೋದೇವು. ಆ ಸಂದರ್ಭದಲ್ಲಿ ಚಾಸಾ–1 ರವರಿಗೆ ಬಾತ್ಮಿ ಬಂದಿದ್ದೆನೆಂದರೆ ಮಣ್ಣುರು ಕಡೆಯಿಂದ ಹೀರೆಬೇವನೂರು ಕಡೆಗೆ ಕಲಬೇರಿಕೆ ಶೆಂದಿ ತೆಗೆದುಕೊಂಡು ಬರುತಿದ್ದರೆ ಅಂತಾ ಮಾಹಿತಿಬಂದ ಮೇರೆಗೆ ಹೀರೆಬೇವನೂರ ಬಸವೇಶ್ವರ ಸರ್ಕಲ್ ಹತ್ತಿರ ರಸ್ತೆ ಗಾವಲು ಮಾಡುತ್ತಿರುವಾಗ ಆಗ ಇಬ್ಬರೂ ವ್ಯಕ್ತಿಗಳು ದ್ವಿ ಚಕ್ರ ವಾಹನದ ಮೇಲೆ ಬಂದರು. ಅವರು ಬರುತ್ತಿದ್ದ ದ್ವಿ ಚಕ್ರವಾಹನದ ಮೇಲೆ ಇಬ್ಬರ ನಡುವೆ ಒಂದು ಗೋಣಿ ಚೀಲ ಇರುವುದು ಕಂಡು ಬಂದಿತ್ತು. ನಮ್ಮನ್ನು ನೋಡಿ ಸದರಿ ವ್ಯಕ್ತಿಗಳನ್ನು ಸುಮಾರು 20 ಮೀಟರ ಅಂತರದಲ್ಲಿ ವಾಹನ ನಿಲ್ಲಿಸಿ ಓಡಲು ಪ್ರಯತ್ನಿಸಿದರು. ಆಗ ಚಾಸಾ–1 ಮತ್ತು ನಾವೆಲ್ಲರೂ ಅವರನ್ನು ದಾಳಿ ಮಾಡಿ ಹಿಡಿದುಕೊಂಡೇವು. ಚಾಸಾ–1 ರವರು ಮಾನ್ಯ ನ್ಯಾಯಾಲಯದಿಂದ ಶೋಧಾನ ವಾರೆಂಟ ಪಡೆದುಕೊಳ್ಳಲು ಸಮಯವಕಾಶ ಇಲ್ಲದ ಕಾರಣ ಶೋಧಾನ

ಸಮುಚಿತ ಆಧಾರ ಪತ್ರವನ್ನು ತಯಾರಿಸಿಕೊಂಡು ಗೋಣಿ ಚೀಲವನ್ನು ಬಿಚಿ ನೋಡಲಾಗಿ ಅದರಲ್ಲಿ ಒಂದು ಲೀಟರ ಸಾಮರ್ಥದ 10 ಪ್ಲಾಸ್ಟಿಕ  ಬಾಟಲಿಗಳಲ್ಲಿ ಶೆಂದಿ ಇರುವುದು ಕಂಡು ಬಂದಿತ್ತು. ಆ ಕುರಿತು ಚಾಸಾ1 ರವರು ಪರವಾನಿಗೆ ಕೇಳಲಾಗಿ ಅವರು ಇಲ್ಲ ಅಂತಾ ತಿಳಿಸಿದರು. ಆಗ ಚಾಸಾ–1 ರವರು ಇದು ಅಬಕಾರಿ ಆಕ್ರಮ ಅಂತಾ ತಿಳಿಸಿ, ಅವರಿಗೆ ಬಂಧನದ ಕುರಿತು ತಿಳಿಸಿದರು. ನಂತರ ಜಪ್ತು ಪಡಿಸಿಕೊಂಡ ಮುದ್ದೆ ಮಾಲುಗಳ ಪೈಕಿ 2 ಬಾಟಲಿಗಳನ್ನು ರಾ.ಪ.ವಗಾಗಿ ಮಾದರಿ ಅಂತಾ ಬೆರ್ಪಡಿಸಿ ಬಟ್ಟೆ ಸುತ್ತಿ ದಾರಿದಿಂದ ಕಟ್ಟಿ ಪಂಚರ ಸಹಿವುಳ್ಳ ಚೀಟಿ ಅಂಟಿಸಿ, ಪಂಚನಾಮೆಯನ್ನು 6.30 ರಿಂದ 7.15 ರವರಗೆ ಮಾಡಿಕೊಂಡು, ಕವಸಾಕಿ ಬಾಕ್ಸರ, ದ್ವಿ ಚಕ್ರ ವಾಹನ, ಆರೋಪಿ ಮತ್ತು ಜಪ್ತು ಪಡಿಸಿದ ಮುದ್ದೆ ಮಾಲಗಳೊಂದಿಗೆ ಠಾಣೆಗೆ ಬಂದು ಆರೋಪಿತರನ್ನು ನ್ಯಾಯಾಂಗ ಬಂಧನದ ಕುರಿತು ಮಾನ್ಯ ನ್ಯಾಯಾಲೀಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

ದಿಃ 24.06.2016 ರಂದು ಎರಡು ಮಾದರಿಗಳನ್ನು ಚಾಸಾ–6 ರವರ ನಿರ್ದೇಶನದ ಮೇರೆಗೆ ರಾಸಾಯಿನಿಕ ಪರೀಕ್ಷ ಕೇಂದ್ರಕ್ಕೆ ನೀಡಿ, ನಂತರ ರಾಸಾಯಿನಿಕ ಪರೀಕ್ಷ ವರದಿಯನ್ನು ದಿಃ 25.06.2016 ವರದಿಯನ್ನು ಪಡೆದುಕೊಂಡು ದಿಃ 26.06.2016 ರಂದು ವರದಿಯನ್ನು ಕಛೇರಿಗೆ ತಂದು ನೀಡಿರುತ್ತೇನೆ. ನಂತರ ಈ ಕುರಿತು ನಾನು ದಿಃ 11.06.2016 ಹೇಳಿಕೆಯನ್ನು ದಾಖಲಿಸಿರುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆ ಚಾಸಾ–6 ರವರು ರಾಸಾಯಿನಿಕ ಪರೀಕ್ಷಗಾಗಿ ನೀಡಿದ ಮನವಿ ಆಗಿರುತ್ತದೆ. ಅದನ್ನು ನಿಪಿ–1 ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆ ರಾಸಾಯಿನಿಕ ಪರೀಕ್ಷಾ  ವರದಿ ಆಗಿದ್ದು. ಅದನ್ನು ನಿಪಿ–2 ಎಂದು ಎಂದು ಗುರುತಿಸಲಾಯಿತು.

ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ಎರಡು ಮದ್ಯದ ಬಾಟಲಿಗಳೆ ದಾಳಿ ಸಂದರ್ಭದಲ್ಲಿ ಜಪ್ತು ಪಡಿಸಿಕುಂಡ ಮುದ್ದೆ ಮಾಲುಗಳ ಪೈಕಿ ತೆಗೆದ ಮಾದರಿಗಳು ಆಗಿದ್ದು, ಅವುಗಳನ್ನು ರಾಸಾಯಿನಿಕ ಪರೀಕ್ಷೆ ನೀಡಿ ಬಂದಿರುತ್ತೇನೆ ಅಂತಾ ಸಕಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು. ಮಾ 1 ಎಂದು ಗುರುತಿಸಲಾಯಿತು.

ಆ ದಿನ ದಾಳಿ ಮಾಡಿ ಹಿಡಿದುಕೊಂಡು ವ್ಯಕ್ತಿಗಳ ಹೆಸರು ರಾಜಂಂದ್ರ ಸದಾಶಿವ ಶಿಂಗೆ ಮತ್ತು ಪರಶುರಾಮ ಸದಾಶಿವ ಶಿಂಗೆ ಅಂತಾ ಇರುತ್ತಾರೆ. ಅವರೇ ಈ ದಿನ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೊಪಿತರು ಆಗಿರುತ್ತಾರೆ ಅಂತಾ ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ: ಪಿ.ಜೆ.ಎನ್ ವಕೀಲರಿಂದ:**

ಚಾಸಾ–1 ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅವರು ನಮ್ಮ ಮೇಲಾಧಿಕಾರಿ ಎಂದರೆ ಸರಿ. ದಿಃ 11.06.2016 ರಂದು ನನ್ನ ಹೇಳಿಕೆಯಲ್ಲಿ ನಾನು ರಾಸಾಯಿನಿಕ ಪರೀಕ್ಷೆ ಕೇಂದ್ರಕ್ಕೆ ಮಾದರಿಗಳನ್ನು ಒಯಿದ ಕುರಿತು ಹೇಳಿ ಬರೆಸಿರುವುದಿಲ್ಲ. ನಾನು ರಾಸಾಯಿನಿಕ ಪರೀಕ್ಷ ಕೇಂದ್ರಕ್ಕೆ ಹೋಗಿ ಮರಳಿ ಬಂದ ಕುರಿತು ಬಸ್ ಟೇಕೆಟನ್ನು ತನಿಖೆ ಅಧಿಕಾರಿಗೆ ನೀಡಿಲ್ಲ. ದಿಃ 11.06.2016 ರಂದು ನಾವು ದಾಳಿಗೆ ಹೋಗಿದ್ದೇವು ಮತ್ತು ಅರೋಪಿತರ ಕಡೆಯಿಂದ ಮುದ್ದೆ ಮಾಲುಗಳನ್ನು ಜಪ್ತು ಪಡಿಸಿಕೊಂಡೇವು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಮತ್ತು ಬಸವೇಶ್ವರ ವೃತ್ತದ ಹತ್ತಿರ ಇಬ್ಬರು ಪಂಚರನ್ನು ಕರೆದುಕೊಂಡು ಹೋದೇವು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು. ಮಾ 1 ರಂತಹ ಬಾಟಲಿಗಳು ಹೊರಗಡೆ ಸಿಗುತ್ತವೆ ಎಂದರೆ ಸರಿ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಚಾಸಾ–1 ರವರು ಖೊಟ್ಟಿ ದೂರನ್ನು ದಾಖಲಿಸದ ಮೇರೆಗೆ ಅದಕ್ಕೆ ಅನುಕೂಲವಾಗಿಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಸ್ಥ,ಳಕ್ಕೆ ಹೋದಾಗ 6 ಗಂಟೆ ಆಗಿತ್ತು. 6 ಗಂಟೆಗೆ ಅಕ್ಕ ಪಕ್ಕದ ಹೊಲದಲ್ಲಿ ಜನ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ 6 ಗಂಟೆಗೆ ಹೊಲದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ.**

**ಸಹಿ/–**

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.,**